**ಭಾರತದ ಹೊರಗಿರುವ ನಿಕಟ ಬಂಧುಗಳಿಂದ ಸಾಲಗಳ ಉದಾರೀಕರಣ**
**ಸೆಪ್ಟೆಂಬರ್ 6, 2002**

ಭಾರತದ ನಿವಾಸಿಗಳು ನಡೆಸುವ ವಿದೇಶೀ ವಿನಿಮಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಈಗ ಜಾರಿಯಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳ ಕಾರ್ಯವಿಧಾನದ ಸರಳೀಕರಣ ಮತ್ತು ಉದಾರೀಕರಣಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕು ಕ್ರಮಗಳನ್ನು ಕೈಗೊಳ್ಳುತ್ತಲೇ ಬಂದಿದೆ.

ಈಗ ಜಾರಿಯಲ್ಲಿರುವ ವಿನಿಯಮಗಳ ಪ್ರಕಾರ, ಭಾರತೀಯ ನಿವಾಸಿಗಳು ಭಾರತದ ಹೊರಗಿರುವ ತಮ್ಮ ನಿಕಟ ಬಂಧುಗಳಿಂದ 250,000 ಅಮೇರಿಕನ್ ಡಾಲರುಗಳವರೆಗೆ ಸಾಲ ಪಡೆಯಲು ಸಾಮಾನ್ಯ ಅನುಮತಿ ಇದೆ. ಆದರೆ ಈ ಸಾಲ ಬಡ್ಡಿರಹಿತವಾಗಿರಬೇಕು ಮತ್ತು ಏಳು ವರ್ಷಗಳಿಗೆ ಮುಂಚೆ ಸಂದಾಯ ಮಾಡುವಂತಿರಬಾರದು. ರಿಸರ್ವ್ ಬ್ಯಾಂಕು ಸ್ವೀಕರಿಸಿದ ಮನವಿಗಳ ಹಿನ್ನೆಲೆಯಲ್ಲಿ, ಅಂಥ ಸಾಲಗಳನ್ನು ಮರುಸಂದಾಯ ಮಾಡುವ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಲು ನಿರ್ಧರಿಸಲಾಗಿದೆ. ಅದರಂತೆ ಈಗ ಭಾರತದ ಹೊರಗೆ ನೆಲೆಸಿರುವ ತಮ್ಮ ನಿಕಟ ಬಂಧುಗಳಿಂದ 250,000 ಅಮೇರಿಕನ್ ಡಾಲರ್‌ಗಳವರೆಗೆ ಸಾಲವನ್ನು ಪಡೆಯಬಹುದಾಗಿರುತ್ತದೆ. ಆದರೆ ಅಂಥ ಸಾಲ ಬಡ್ಡಿರಹಿತವಾಗಿರಬೇಕು ಮತ್ತು ಒಂದು ವರ್ಷದ ತರುವಾಯ ಮರುಸಂದಾಯ ಮಾಡುವಂಥದಾಗಿರಬೇಕು.

ವಿದೇಶೀ ವಿನಿಮಯ ನಿರ್ವಹಣಾ ಅಧಿನಿಯಮ, 1999 (ಫೆಮಾ)ರ ಅಡಿಯಲ್ಲಿ ರಚಿಸಲಾದ ಈಗಿನ ನಿಯಮಗಳು/ನಿಬಂಧನೆಗಳನ್ನು ತಿದ್ದುಪಡಿ ಮಾಡುವ ಅಧಿಸೂಚನೆಯನ್ನು ಹೊರಡಿಸಬೇಕಿದ್ದು, ಈ ಸಂಬಂಧವಾಗಿ ಸ್ವೀಕರಿಸಲಾಗುವ ಅರ್ಜಿಗಳನ್ನು ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಚೇರಿಗಳು ಆದಷ್ಟು ಶೀಘ್ರವಾಗಿ ವಿಲೇವಾರಿ ಮಾಡುತ್ತವೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/266